ಮಳೆಯೊಂದಿಗೆ ತಳಕು ಹಾಕಿಕೊಂಡ ಕೃಷಿ ಸಂಭ್ರಮ ಕೊಡಗಿನಲ್ಲಿ ಉಳಿದೆಡೆಗಿಂತ ಕೊಂಚ ಹೆಚ್ಚೇ. ಆದರೆ, ಈಚಿನ ವರ್ಷಗಳಲ್ಲಿ ಮಳೆಯೊಂದಿಗೆ ಸಂಭ್ರಮದ ಬದಲು, ಪ್ರವಾಹದ ಆತಂಕ ತಳಕು ಹಾಕಿಕೊಂಡಿದೆ. ಮಳೆಗಾಲ ಬಂದರೆ ಸಾಕು, ಬೆಟ್ಟಗುಡ್ಡಗಳ ನಾಡಿನ ಜನರಿಗೆ ಜೀವಭಯ. ಆಶ್ರಯ ನೀಡುವ ಮನೆಗಳು, ಆಸರೆಯಾಗಿದ್ದ ಕೃಷಿ ಜಮೀನು, ಜಾನುವಾರುಗಳು ಎಲ್ಲವೂ ಭೂಕುಸಿತ–ಪ್ರವಾಹದಲ್ಲಿ ಕೊಚ್ಚಿಹೋಗುವ ಭಯ. ಅದರಲ್ಲೂ ಆಗಸ್ಟ್ ತಿಂಗಳಿನಲ್ಲಿ ಸುರಿಯುವ ಜನಜೀವನ ಮುದುಡಿ ಹೋಗುತ್ತಿದೆ.

ನೆರೆ, ಗುಡ್ಡ ಕುಸಿತ ಜನಜೀವನವನ್ನು ಅಲ್ಲಾಡಿಸಿಬಿಟ್ಟಿದೆ. ಹಾಗಿದ್ದರೆ, ಕೊಡಗು ಬದಲಾಗಿ ಹೋಯಿತೇ? ಹಿಂದೆ ಪರಿಸ್ಥಿತಿ ಹೀಗಿರಲಿಲ್ಲವೇ? ನೂರಾರು ವರ್ಷದಿಂದ ಉಳಿದಿದ್ದ ಮುಗಿಲೆತ್ತರದ ಬೆಟ್ಟದ ಸಾಲುಗಳು ಕುಸಿಯಲು ಆರಂಭಿಸಿವೆಯೇ?

### ಕಹಿ ನೆನಪುಗಳ ಮೂರು ವರ್ಷಗಳು

ಕಳೆದ ಮೂರು ವರ್ಷಗಳಿಂದ ಈ ಜಿಲ್ಲೆಯ ಚಿತ್ರಣ ಬದಲಾಗಿದೆ. ಅದೆಷ್ಟೋ ವರ್ಷಗಳಿಂದ ಕೊಡಗು ನೆಲದ ಹೆಮ್ಮೆಯ ಕೋಡುಗಳಂತಿದ್ದ, ನಿಸರ್ಗ ಸಂಪತ್ತಿನ ಶಿಖರಗಳಂತೆ ಕಂಗೊಳಿಸುತ್ತಿದ್ದ ಗುಡ್ಡಗಳು ಕುಸಿದಿವೆ.

2018ರಲ್ಲಿ 32 ಹಳ್ಳಿಗಳಲ್ಲಿ ಭೂಕುಸಿತ ಸಂಭವಿಸಿತ್ತು. ಕಳೆದ ವರ್ಷವೂ 'ತೋರಾ' ಎಂಬಲ್ಲಿ ಭೀಕರ ಕುಸಿತ ಸಂಭವಿಸಿತ್ತು. ಹಲವು ಕಾರ್ಮಿಕರು ಜೀವಂತವಾಗಿ ಸಮಾಧಿ ಆಗಿದ್ದರು. ಈ ಬಾರಿ ಜೀವನದಿಯ ಉಗಮ ಸ್ಥಳ ತಲಕಾವೇರಿಯಲ್ಲಿ ದುರಂತ ಸಂಭವಿಸಿದೆ. ಮೂರು ವರ್ಷಗಳಿಂದಲೂ ಮಳೆದುರಂತ ಬಿಟ್ಟೂ ಬಿಡದೆ ಕಾಡುತ್ತಿದೆ. ಅನಾಹುತ ತಡೆಯಲು ಶಾಶ್ವತ ಯೋಜನೆ ರೂಪಿಸಲು ಮಾತ್ರ ಸಾಧ್ಯ ಆಗುತ್ತಿಲ್ಲ.

ಭೂಕುಸಿತಕ್ಕೆ ಕಾರಣಗಳಾದರೂ ಏನು? ಹಿರಿಯರು ಕಾರಣಗಳ ಪಟ್ಟಿಯನ್ನೇ ನೀಡುತ್ತಾರೆ: ಅಂಕೆಶಂಕೆಯಿಲ್ಲದ ಪ್ರವಾಸೋದ್ಯಮ, ಜನಸಂಖ್ಯೆ ಹೆಚ್ಚಳ, ಅವೈಜ್ಞಾನಿಕ ಕೃಷಿ, ಬೆಟ್ಟಗಳ ಮೇಲೆ ಕಾಫಿ ಕೃಷಿಗೆ ಕೆರೆ ನಿರ್ಮಾಣ, ಹೋಮ್ ಸ್ಟೇ ಮತ್ತು ರೆಸಾರ್ಟ್‌ಗಳ ನಿರ್ಮಾಣ, ಇವೆಲ್ಲದರ ಜೊತೆಗೆ ನಿರಂತರ ಕಾಡು ನಾಶ. ಈ ಎಲ್ಲ ಕಾರಣಗಳನ್ನು 'ಪ್ರಕೃತಿಯಲ್ಲಿ ಮನುಷ್ಯನ ಹಸ್ತಕ್ಷೇಪದ ಪರಿಣಾಮ' ಎಂದು ನಾಲ್ಕೇ ಪದಗಳಲ್ಲಿ ಹೇಳಿಬಿಡಬಹುದು.

ಎರಡು ದಶಕಗಳ ಮಳೆಯ ಲೆಕ್ಕಾಚಾರವನ್ನು ಗಮನಿಸಿದರೆ, ಕೊಡಗಿನಲ್ಲಿ 20 ವರ್ಷಗಳ ಹಿಂದಿನಷ್ಟೇ ಈಗಲೂ ಮಳೆಯಾಗುತ್ತಿದೆ. ಆದರೆ, ಮಳೆಯ ಅವಧಿ ಮಾತ್ರ ಕಡಿಮೆಯಾಗಿದೆ. ತಿಂಗಳಿಡೀ ಸುರಿಯಬೇಕಿದ್ದ ಮಳೆ, ಒಂದೇ ವಾರದಲ್ಲಿ ಸುರಿದು ಸುಮ್ಮನಾಗುತ್ತಿದೆ. ಕಾವೇರಿ ಮತ್ತು ಲಕ್ಷ್ಮಣತೀರ್ಥ ನದಿಪಾತ್ರಗಳು ಕಿರಿದಾಗಿವೆ. ಹೊರಗಿನಿಂದ ಬಂದವರು ಕುಶಾಲನಗರದ ನಾಲ್ಕು ಬಡಾವಣೆ, ಸಿದ್ದಾಪುರ, ಕರಡಿಗೋಡು, ಗುಹ್ಯ, ಭೇತ್ರಿ ಭಾಗದ ನದಿ ದಂಡೆಯ ಮೇಲೆಯೇ ಮನೆ ಕಟ್ಟಿದ್ದಾರೆ. ಪ್ರವಾಸಿಗರಿಗೆ ಆಹ್ಲಾದಕರ ವಾತಾವರಣ ಸೃಷ್ಟಿಸಲು ನದಿಯ ದಂಡೆಗಳನ್ನು



